## ನಗರಾಭಿವೃದ್ಧಿ ಮಂತ್ರಾಲಯ

## ಅಧಿಸೂಚನೆ

## ನವದೆಹಲಿ, 25 ನೇ ಮೇ 2011

**ಸಾ.ಕಾ.ನಿ. 402(ಇ)** ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60) ರ ಪ್ರಕರಣ 32 ರ ಮೇರೆಗೆ ಪದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ,

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:** (1) ಈ ನಿಯಮಗಳ ಬೆಂಗಳೂರು ಮೆಟ್ರೋ ರೈಲ್ವೆ (ಸಾಗಣೆ ಮತ್ತು ಟಿಕೆಟ್) ನಿಯಮಗಳು, 2011 ಎಂದು ಕರೆಯತಕ್ಕದ್ದು.

(2) ಅವು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ವ್ಯಾಖ್ಯಾನಗಳು:** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

   (ಎ) "ಅಧಿನಿಯಮ" ಎಂದರೆ, ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60);

   (ಬಿ) "ಅಧಿಕೃತ" ಎಂದರೆ ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದಿಂದ ಅಧಿಕೃತಗೊಂಡದ್ದು.

(2) ಈ ನಿಯಮಗಳಲ್ಲಿ ಉಪಯೋಗಿಸಿದ ಮತ್ತು ವ್ಯಕ್ತಪಡಿಸಿದ ಪದಗಳನ್ನು ಪರಿಭಾಷಿಸದಿದ್ದರೆ, ಆದರೆ ಅವುಗಳನ್ನು ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60) ರಲ್ಲಿ ಪರಿಭಾಷಿಸಿದ್ದರೆ, ಅದರಲ್ಲಿ ಅವುಗಳಿಗೆ ನೀಡಿರುವ ಅರ್ಥವನ್ನೇ ಈ ಅಧಿನಿಯಮದಲ್ಲೂ ಅರ್ಥೈಸತಕ್ಕದ್ದು.

3. **ಸರಕು ಅಥವಾ ಸರಂಜಾಮುಗಳ ಸಾಗಾಣೆ:** ಬೆಂಗಳೂರು ಮೊಟ್ರೋ ರೈಲ್ವೆ ಆಡಳಿತದ ಪೂರ್ವಾನುಮತಿಯಿಲ್ಲದೆ, ಯಾವುದೇ ವ್ಯಕ್ತಿಯು, ಬೆಂಗಳೂರು ಮೊಟ್ರೋ ರೈಲಿನಲ್ಲಿ ಪ್ರಯಾಣಿಸುವಾಗ ತನ್ನೊಂದಿಗೆ 60 centimeter X 45 centimeter X 25 centimeter ಗಿಂತ ಹೆಚ್ಚಿನ ಗಾತ್ರದ ಹಾಗೂ 15 ಕಿ.ಗ್ರಾಂ ಗಿಂತ ಹೆಚ್ಚಿನ ತೂಕದ ಸರಕನ್ನು ಸಾಗಿಸತಕ್ಕದ್ದಲ್ಲ.

**4. ಅಪಾಯಕಾರಿ ಹಾಗೂ ಅಪರಾಧಿಕ ವಸ್ತುಗಳ ಸಾಗಾಣಿಕೆ ಮೇಲಿನ ನಿಷೇಧ:** (1) ಯಾವುದೇ ವ್ಯಕ್ತಿಯು ಬೆಂಗಳೂರು ಮೆಟ್ರೋ ರೈಲಿನಲ್ಲಿ, ಈ ಮುಂದೆ ತಿಳಿಸಿರುವ ಅಪಾಯಕಾರಿ ವಸ್ತುಗಳನ್ನು ಹೊಂದಿರತಕ್ಕದ್ದಲ್ಲ ಅಥವಾ ಹೊಂದಿರುವುದಕ್ಕೆ ಕಾರಣವಾಗತಕ್ಕದ್ದಲ್ಲ. ಅವುಗಳೆಂದರೆ,

(ಎ) ಸ್ಫೋಟಕಗಳು ಅಥವಾ ಬೆಂಕಿ ಹೊತ್ತಿಕೊಳ್ಳುವ ಅಥವಾ ಎರಡೂ ಬಗೆಯ ಸ್ಫೋಟಕಗಳು.
(ಬಿ) ಸಮ್ಮರ್ದಿತ ಅನಿಲ, ದ್ರವೀಕೃತ ಅಥವಾ ಒತ್ತಡದಲ್ಲಿ ಕರಗಿಸಿದ ಅನಿಲಗಳು
(ಸಿ) ಪೆಟ್ರೋಲಿಯಂ ಮತ್ತು ಇತರೆ ಸುಲಭದಹ್ಯ ದ್ರವಗಳು
(ಡಿ) ಸುಲಭದಹ್ಯ ಘನಗಳು
(ಇ) ಉತ್ಕರ್ಷಿಸುವ ವಸ್ತುಗಳು
(ಎಫ್) ವಿಷಪೂರಿತ (ನಂಜುಕಾರಕ) ವಸ್ತುಗಳು
(ಜಿ) ಆಸಿಡ್ ಮತ್ತು ಇತರೆ ನಶಿಸುವ ವಸ್ತುಗಳು
(ಹೆಚ್) ವಿಕಿರಣ ಸೂಸುವ ವಸ್ತುಗಳು
(ಜೆ) ಆಯುಧಗಳು, ಶಸ್ತ್ರಗಳು ಮತ್ತು ಮದ್ದುಗುಂಡುಗಳು

(2) ಯಾವುದೇ ವ್ಯಕ್ತಿ ಬೆಂಗಳೂರು ಮೆಟ್ರೋ ರೈಲಿನಲ್ಲಿ ಈ ಕೆಳಗಿನ ಅಪರಾಧಿಕ ವಸ್ತುಗಳನ್ನು ಸಾಗಿಸತಕ್ಕದ್ದಲ್ಲ ಹಾಗೂ ಸಾಗಿಸಲು ಕಾರಣವಾಗತಕ್ಕದ್ದಲ್ಲ. ಅವುಗಳೆಂದರೆ,

(ಎ) ರಕ್ತ, ಒಣಗಿಸಿದ.
(ಬಿ) ಶವ
(ಸಿ) ಸತ್ತ ಪ್ರಾಣಿಗಳ ಮೃತದೇಹ
(ಡಿ) ಬ್ಲೀಚ್ ಮಾಡಿದ ಹಾಗೂ ಶುದ್ಧೀಕರಿಸಿದ ಮೂಳೆಗಳನ್ನು ಹೊರತುಪಡಿಸಿ, ಇತರೆ ಮೂಳೆಗಳು
(ಇ) ಯಾವುದೇ ರೀತಿಯ ಗೊಬ್ಬರ
(ಎಫ್) ಜೂಲು ಬಟ್ಟೆ, ಎಣ್ಣೆ ಮಿಶ್ರಿತ ಜೂಲುಬಟ್ಟೆಗಳನ್ನೊಳಗೊಂಡಂತೆ,
(ಜಿ) ಕೊಳೆತ ಪ್ರಾಣಿ ಅಥವಾ ತರಕಾರಿ ಪದಾರ್ಥಗಳು
(ಹೆಚ್) ಮಾನವ ಚಿತಾ ಭಸ್ಮ
(ಐ) ಮಾನವ ಅಸ್ಥಿಪಂಜರ
(ಜೆ) ಮಾನವನ ದೇಹದ ಅಂಗಗಳು

(3) ಯಾವುದೇ ವ್ಯಕ್ತಿ ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರಾಣಿ ಮತ್ತು ಪಕ್ಷಿಗಳನ್ನು ಸಾಗಿಸತಕ್ಕದ್ದಲ್ಲ ಹಾಗೂ ಸಾಗಿಸಲು ಕಾರಣವಾಗತಕ್ಕದ್ದಲ್ಲ.

(4) ಬೆಂಗಳೂರು ಮೆಟ್ರೋ ರೈಲಿನ ಯಾವುದೇ ಸಿಬ್ಬಂದಿಗೆ, ಯಾವುದೇ ವ್ಯಕ್ತಿ ಆತನು ಹೊಂದಿರುವ ಪೆಟ್ಟಿಗೆಯಲ್ಲಿ ಅದು ಯಾವುದೇ ರೀತಿಯಲ್ಲಿರಲಿ, ಅನ್ಯಥಾ ಅಪಾಯಕಾರಿ ಅಥವಾ ಅಪರಾಧಿಕ ವಸ್ತು ಹೊಂದಿರುವನೆಂದು

ನಂಬುವ ಕಾರಣವಿದ್ದಲ್ಲಿ, ಆತನು ಆ ಪೆಟ್ಟಿಗೆಯಲ್ಲಿನ ವಸ್ತುವಿನ ಬಗ್ಗೆ ತಿಳಿಯಲು ಆ ಪೆಟ್ಟಿಗೆಯನ್ನು ತೆರೆಸಬಹುದು.

(5) ಯಾವುದೇ ರೀತಿಯ ಅಪಾಯಕಾರಿ, ಅಪರಾಧಿಕ ವಸ್ತುಗಳನ್ನು ಸಾಗಿಸುತ್ತಿರುವ ಯಾವುದೇ ವ್ಯಕ್ತಿಯನ್ನು ಬೆಂಗಳೂರು ಮೆಟ್ರೋ ರೈಲಿನಲ್ಲಿನ ಯಾವುದೇ ಸಿಬ್ಬಂದಿಯು ಹೊರಹಾಕಬಹುದು

(6) ಈ ನಿಯಮಗಳಲ್ಲಿ ಏನೇ ಇದ್ದರೂ, ಕೇಂದ್ರದ ಸಶಸ್ತ್ರ ದಳ, ರಾಜ್ಯ ಪೋಲಿಸು, ಪ್ಯಾರಾ ಮಿಲಿಟರಿ ದಳ, ರಾಷ್ಟ್ರೀಯ ಕೆಡೆಟ್ ಕ್ರಾಫ್ಟ್ ಮತ್ತು ಇತರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರೀಯ ಕ್ಷೇತ್ರದ ಸಮವಸ್ತ್ರ ದಳಗಳ ಸದಸ್ಯರು ಕರ್ತವ್ಯನಿರತ ಸಮಯದಲ್ಲಿ ಅಧಿಕೃತ ಆಯುಧಗಳನ್ನು, ಶಸ್ತ್ರಗಳನ್ನು ಮತ್ತು ಮದ್ದುಗುಂಡುಗಳನ್ನು ಬೆಂಗಳೂರು ಮೆಟ್ರೋ ರೈಲಿನಲ್ಲಿ ಒಯ್ಯಬಹುದು.

5. **ಇತರೆ ಅಧಿನಿಯಮ ಮತ್ತು ನಿಯಮಗಳ ಅನ್ವಯಿಸುವಿಕೆ:** (1) ಈ ನಿಯಮಗಳಲ್ಲಿನ ಯಾವುದನ್ನೂ ಸಹ ಈ ಕೆಳಗಿನ ಅಧಿನಿಯಮಗಳ ಪ್ರವರ್ತನೆಯಿಂದ ಬೇರ್ಪಡಿಸತಕ್ಕದ್ದಲ್ಲ.

(ಎ) ಸ್ಫೋಟಕ ಅಧಿನಿಯಮ, 1884 (1884 ರ ಅಧಿನಿಯಮ 4)

(ಬಿ) ಸ್ಫೋಟಕ ನಿಯಮಗಳು, 1983

(ಸಿ) ಭಾರತೀಯ ಶಸ್ತ್ರಗಳ ಅಧಿನಿಯಮ, 1859 (1959 ರ ಅಧಿನಿಯಮ 54)

(ಡಿ) ಭಾರತೀಯ ಶಸ್ತ್ರಗಳ ನಿಯಮಗಳು, 1962

(2) ಸುರಕ್ಷತೆಗಾಗಿ ಒಂದು ಬೆಂಕಿಪೊಟ್ಟಣ ಅಥವಾ ಗ್ಯಾಸ್ ಲೈಟರನ್ನು ಕೊಂಡೊಯ್ಯಲು, ಈ ನಿಯಮಗಳಲ್ಲಿನ ಯಾವುದಾ ಸಹ, ಬೆಂಗಳೂರು ಮೊಟ್ರೋ ರೈಲಿನ ಪ್ರಯಾಣಿಕರಿಗೆ ಅಡ್ಡಿಪಡಿಸತಕ್ಕದ್ದಲ್ಲ.

6. **ಸಾಂಕ್ರಾಮಿಕ ಮತ್ತು ಸೋಂಕು ಕಾಯಿಲೆಗಳೆಂದು ಘೋಷಿತವಾದವುಗಳು:** ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಸಾಂಕ್ರಾಮಿಕ ಅಥವಾ ಸೊಂಕು ಕಾಯಿಲೆಗಳಿಂದ ಮತ್ತು ಈ ಕೆಳಗಿನವುಗಳನ್ನೊಳಗೊಂಡು ಬಳಲುತ್ತಿದ್ದರೆ, ಅಂತವರು ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರಯಾಣಿಸತಕ್ಕದ್ದಲ್ಲ. ಅವುಗಳೆಂದರೆ,

(ಎ) ಸೆರೆಬ್ರೋ - ಸ್ಪೆನಲ್ ಮಿನಿಗಿಟಿಸ್
(ಬಿ) ಸಿಡುಬು
(ಸಿ) ಕಾಲರಾ
(ಡಿ) ಡಿಫ್ತೀರಿಯಾ

(ಇ) ದಢಾರ
(ಎಫ್) ಮಂಗನ ಬಾವು
(ಜಿ) ಕೇಸರಿ ಜ್ವರ
(ಹೆಚ್) ವಿಷಮ ಜ್ವರ
(ಐ) ಟೈಫ್ಯಾಡ್ ಜ್ವರ
(ಜೆ) ನಾಯಿ ಕೆಮ್ಮು

ಪರಂತು, ಮುಕ್ತಾಯಗೊಂಡ (ಸೊಂಕುರಹಿತ) ಕುಷ್ಠ ರೋಗಿಯು, ತಾನು ಸೊಂಕುರಹಿತನೆಂದು ನೋಂದಣಿಯಾದ ವೈದ್ಯ ವೃತ್ತಿಗರು ಪ್ರಮಾಣೀಕರಿಸಿದ ಪ್ರಮಾಣಪತ್ರವನ್ನು ಹೊಂದಿ, ಬೆಂಗಳೂರು ಮೊಟ್ರೋ ರೈಲಿನಲ್ಲಿ ಪ್ರಯಾಣಿಸಬಹುದು.

7. **ಟಿಕೆಟ್‌ನ ವಿವರಗಳು:** (1) ಯಾವುದೇ ವ್ಯಕ್ತಿಯು ಮೆಟ್ರೋ ರೈಲಿನಲ್ಲಿ ಪ್ರಯಾಣಿಸುವ ಇಚ್ಛೆಯಿದ್ದಲ್ಲಿ, ಹಣ ಪಾವತಿಸಿ, ಬೆಂಗಳೂರು ಮೆಟ್ರೋ ರೈಲಿನ ಆಡಳಿತ ಅಥವಾ ಬೆಂಗಳೂರು ಮೆಟ್ರೋ ರೈಲಿನ ಆಡಳಿತದ ಅಧಿಕೃತ ಏಜೆಂಟ್‌ನಿಂದ ಟಿಕೆಟ್ ಪಡೆಯತಕ್ಕದ್ದು.

(2) ಉಪನಿಯಮ(1) ರಲ್ಲಿ ನೀಡಲಾದ ಟಿಕೆಟ್‌ಗಳು ಈ ಕೆಳಕಂಡ ವಿಧಗಳಂತಿರುತ್ತವೆ. ಅವುಗಳೆಂದರೆ:-

(i) ಬಹು ಪ್ರಯಾಣಕ್ಕಾಗಿ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್
(ii) ಏಕ ಪ್ರಯಾಣಕ್ಕಾಗಿ ಸಂಪರ್ಕರಹಿತ ಸ್ಮಾರ್ಟ್ ಟೋಕನ್
(iii) ಸಮೂಹ ಪ್ರಯಾಣಕ್ಕಾಗಿ ನೀಡಿದ ಸಮೂಹ ಕಾಗದದ ಟಿಕೆಟ್
(iv) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತವು ತೀರ್ಮಾನಿಸ ಬಹುದಾದ ಇತರ ಯಾವುದೇ ರೀತಿಯದು.

(3) ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್

(1) ಸಂಪರ್ಕರಹಿತ ಸ್ಮಾರ್ಟ್ ಕಾರ್ಡುಗಳು ಎರಡು ವಿಧದಲ್ಲಿರತಕ್ಕದ್ದು; ಅವುಗಳೆಂದರೆ ಮೆಟ್ರೋ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್ ಮತ್ತು ಕಾಂಬೋ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್

(ii) ಟಿಕೆಟ್ ಉಪಯೋಗಕ್ಕಾಗಿ ಮೆಟ್ರೋವು ಕೇವಲ ಸಂಪರ್ಕರಹಿತ ಚಿಪ್‌ನ್ನು ಹೊಂದಿದ್ದರೆ, ಕಾಂಬೋ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್‌ಗಳು ಒಂದೇ ಕಾರ್ಡಿನಲ್ಲಿ ಕ್ರಮವಾಗಿ ಸಂಪರ್ಕರಹಿತ ಚಿಪ್ ಮತ್ತು ಟಿಕೆಟ್ ಹಾಗೂ ಬ್ಯಾಂಕ್ ವ್ಯವಹಾರಕ್ಕೆ ಈ ಎರಡೂ ವಿಧಗಳನ್ನು ಹೊಂದಿರತಕ್ಕದ್ದು.

(ii) ಮೆಟ್ರೊ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್ ಮತ್ತು ಕಾಂಬೋ ಸಂಪರ್ಕರಹಿತ ಸ್ಮಾರ್ಟ್ ಕಾರ್ಡ್ ಈ ಎರಡೂ ಕಾರ್ಡುಗಳು ಟಿಕೆಟ್ ವಿತರಣಾ ಕಾರ್ಯದಲ್ಲಿ ಒಂದೇ ಬಗೆಯ ಕಾರ್ಯನಿರ್ವಹಿಸತಕ್ಕದ್ದು.

(4) ಸಂಪರ್ಕರಹಿತ ಸ್ಮಾರ್ಟ್ ಟೋಕನ್

(i) ಸಂಪರ್ಕರಹಿತ ಸ್ಮಾರ್ಟ್ ಟೋಕನ್‌ಗಳನ್ನು ಕೇವಲ ಒಂದು ಪ್ರಮಾಣಕ್ಕಾಗಿ ಉಪಯೋಗಿಸತಕ್ಕದ್ದು.
(ii) ಸಂಪರ್ಕರಹಿತ ಸ್ಮಾರ್ಟ್ ಟೋಕನ್, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತವು ಕಾಲ ಕಾಲಕ್ಕೆ ಪ್ರಯಾಣವೆಚ್ಚ ಕೋಷ್ಟಕದಲ್ಲಿ ನಿಗಧಿಪಡಿಸಬಹುದಾದ ಮೌಲ್ಯವನ್ನು ಹೊಂದಿರತಕ್ಕದ್ದು.
(iii) ಪಾವತಿಸಿದ ಪ್ರಯಾಣವೆಚ್ಚವನ್ನು ಟೋಕನ್‌ನಲ್ಲಿ ಸಂಕೇತಿಸಿರಬೇಕು ಮತ್ತು ಅದರ ಸಿಂಧುತ್ವ ಒಂದು ದಿನ ಮಾತ್ರ ಇರತಕ್ಕದ್ದು.
(iv) ಸಂಪರ್ಕರಹಿತ ಸ್ಮಾರ್ಟ್ ಟೋಕನ್‌ಗಳನ್ನು ಪ್ರಯಾಣ ಮುಕ್ತಾಯಗೊಂಡ ನಂತರ ಹೊರ ದ್ವಾರದಲ್ಲಿ ಹಿಡಿದಿಟ್ಟುಕೊಳ್ಳತಕ್ಕದ್ದು.

(5) ಸಮೂಹ ಕಾಗದದ ಟಿಕೆಟ್

ಸಮೂಹ ಕಾಗದದ ಟಿಕೆಟ್, ಒಂದೇ ಟಿಕೆಟ್ ಆಗಿದ್ದು ಹೆಚ್ಚು ಜನರು ಒಟ್ಟಾಗಿ ಪ್ರಯಾಣಿಸಲು ಮುಂಗಡ ಕಾಯ್ದಿರಿಸಿದ ಮತ್ತು ಭೌತಿಕ ಪರಿಶೀಲನೆಗೊಳಪಡಿಸಿ ಪ್ರಯಾಣಿಸಲು ಅನುಮತಿ ನೀಡಿದ ಒಂದು ಕಾಗದದ ಚೀಟಿಯಾಗಿರುತ್ತದೆ.

(ಎಫ್. ಸಂಖ್ಯೆ. ಕೆ-14011/45/2010-ಮೆಟ್ರೋ)
ಎಸ್.ಕೆ. ಲೋಹಿಯಾ, ಓಎಸ್‌ಡಿ (ನಗರ ಸಾರಿಗೆ) ಮತ್ತು ಕಾ.ಅ. ಜಂಟಿ ಕಾರ್ಯದರ್ಶಿ